ಪದಬಂಧ



ಎಡದಿಂದ ಬಲಕ್ಕೆ:

1. ವಿಹಾರಕ್ಕೆಂದು ಬರುವವರೊಡನೆಯೇ ಆತನ ಎಲ್ಲ ಕೆಲಸ ಕಾರ್ಯ 4
3. ಹಾಗೂ ಮೋಸ, ಹೀಗೂ ಮೋಸ ಅದಾವ ಜನಪ್ರಿಯ ತಿಂಡಿ? 3
4. ಈ ಜ್ಯೋತಿಯನ್ನು ಆರಿಸುವಂತಿಲ್ಲ, ಜೋಪಾನ 3
6. ಹಗಲಿನ ನಿದ್ರೆ ಕುರಿತ ಒಂದು ಹಾಸ್ಯ ತುಣುಕು 4
7. ಜಗತ್ತಿನೆಲ್ಲೆಡೆ ಆತಂಕ ಹರಡಿದ್ದಾನೆ, ಯಮ 3
9. ಅಂಜುಬುರುಕನಿಂದ ತರಿಸಲು ಸಾಧ್ಯವಾದೀತೇ ಒಂದು ತಾವರೆ? 3
11. ಗರೀಬರನ್ನು ಬದುಕಲು ಬಿಡುವುದೇನು ಈ ಬೃಹತ್ ಶಹರ? 3
13. ಕ್ಷ ಕಿರಣದ ಹಾವಳಿಯ ವಿರುದ್ಧ ಭದ್ರ ಕಾವಲು 3
15. ವ್ಯವಸಾಯವನ್ನೇ ನಂಬಿದ್ದವನ ಬದುಕೇ ಅಂತ್ಯವಾಯಿತೇ? 4
17. ಮುಂದಾಳಾಗಲು ತಕ್ಕಂತಿದೆ ಆತನ ಮಸ್ತಿಷ್ಕ 3
18. ಅಷ್ಟೂ ವನಿತೆಯರಲ್ಲಿ ಒಬ್ಬಾಕೆ ಮಾತ್ರ ತುಂಬ ಸೌಜನ್ಯಶೀಲೆ 3
19. ಕಾಡುಗಳ್ಳರ ಕೈಯಲ್ಲಿ ಗಿಡ ಕಡಿವ ಸಾಧನ 4

ಮೇಲಿಂದ ಕೆಳಕ್ಕೆ:

1. ವ್ಯಾಸಂಗವನ್ನು ಮಾಡಲಿಲ್ಲ ಎಂಬುದೇ ಆತನ ಭಾರೀ ದುಃಖ 3
2. ಆತನ ನೀಚ ರೂಪ ಬಯಲಾಗುವ ವೇಳೆಗೆ ಇರುಳು ಬಂದಿತ್ತು 3
3. ಹಿತವಾದ ಮಾತು, ಹಾಸ್ಯದ ಜೊತೆಗೂಡಿದ್ದು 3
5. ಇಷ್ಟೊಳ್ಳೇ ಸಂಭಾವನೆ ಸಿಗಲು ಒಳ್ಳೆಯ ಅದೃಷ್ಟ ಇರಬೇಕು 3
7. ಆತಂಕದ ದಿನ ಬಂದದ್ದು ಹಾಗೇ ಮಾಯವಾದೀತು 4
8. ಕಾಲಹರಣಕ್ಕೆ ತಕ್ಕದ್ದೇ ಈ ಬಿಸಿ ಮರುಭೂಮಿ? 4
9. ಅಂಗರಕ್ಷಕರನ್ನು ಒದಗಿಸುವ ಕೋರಿಕೆಗೆ ಒಪ್ಪಿಗೆ ಸಿಕ್ಕಿದೆ 4
10. ಆ ಪ್ರದೇಶದಲ್ಲಿದೆ ನೋಡಿ, ಜೇನ್ನೊಣಗಳ ಭಾರೀ ಸಂಗ್ರಹ 4
12. ಎಲ್ಲೆಲ್ಲೂ ಗರ್ವ ಮೆರೆಯುವುದೇ ಆತನ ಹೆಚ್ಚುಗಾರಿಕೆ 3
14. ಎಲ್ಲರೂ ಕ್ಷೇಮವಾಗಿರುವಂತೆ ಮಾಡಬಲ್ಲ ಸಾಮರ್ಥ್ಯ ಆತನಿಗೆ ಇದೆ 3
15. ಆಳಕ್ಕೆ ಇಳಿಯಲು ಆತನಿಗೆ ತುಂಬ ಅಂಜಿಕೆ 3
16. ಎಲ್ಲರೂ ನಲಿವಂತೆ ಮಾಡಿದ್ದು ಅದಾವ ಹಕ್ಕಿ? 3

## 9–4–2020 ಉತ್ತರಗಳು

ಎಡದಿಂದ ಬಲಕ್ಕೆ:

1.ಅನಾಮಿಕ 3. ಜಾಮೂನು 4. ಪೋಷಾಕು 6. ಜಲಾವೃತ 7. ಅನುಮಾನ 8. ಆಕರ್ಷಕ 10. ತಡಸಲು 12. ಆರೋಹಣ 14. ನೂಲುಡುಗೆ 16. ಹುರುಪು 17. ಣರುತ (=ತರುಣ ಹಿಂದುಮುಂದು ) 18. ರವಾನಿಸು

ಮೇಲಿಂದ ಕೆಳಕ್ಕೆ:

1. ಅನುಜ 2. ಕಪೋತ 3. ಜಾಯಮಾನ 5. ಕುಹಕ 7. ಅಸಮ್ಮತ 9. ಕಡಿವಾಣ 11. ಸಲಹು 13. ವೀರೋಚಿತ 14. ನೂಪುರ 15. ಗೆಣಸು

ಪ್ರಶ್ನಾ ೦ಕಣ

# ಆನೆ ಚರ್ಮದ ತುಂಬ ಸುಕ್ಕುಗಳು ಏಕೆ?

ಆನೆ ಎಂದೊಡನೆ ಕಣ್ಮುಂದೆ ಬರುವ ಅದರ ವೈಶಿಷ್ಟ್ಯಗಳು ಎರಡು: ಬೃಹದಾಕಾರ ಮತ್ತು ಸೊಂಡಿಲಿನ ಜೊತೆಗಿನ ಅದ್ಭುತದ ದಂತ ಜೋಡಿ (ಚಿತ್ರ2). ಅಷ್ಟೇ ವಿಶಿಷ್ಟವಾದ ಮತ್ತೂ ಒಂದು ಲಕ್ಷಣ ಆನೆಗಳಿಗೆ ಇದೆ. ಅದೇ ಅವುಗಳ ಸುಕ್ಕುಗಟ್ಟಿದ ಚರ್ಮ. ಮಹತ್ವದ ಅಂಶ ಏನೆಂದರೆ, ಆನೆ ಚರ್ಮದ ಸುಕ್ಕುಗಳು ವೃದ್ಧಾಪ್ಯದ ಲಕ್ಷಣ ಅಲ್ಲ. ತುಂಬ ಎಳೆ ವಯಸಿನ ಮರಿಗಳಲ್ಲಿ ಮಾತ್ರ ನಯವಾಗಿರುವ ಚರ್ಮ (ಚಿತ್ರ1) ಕೆಲ ವರ್ಷಗಳಲ್ಲೇ ಸುಕ್ಕುಗಟ್ಟತೊಡಗುತ್ತದೆ; ವರ್ಷದಿಂದ ವರ್ಷಕ್ಕೆ ಸುಕ್ಕುಗಳು ಅಧಿಕವಾಗುತ್ತವೆ, ಹೆಚ್ಚು ಹೆಚ್ಚು ಆಳವೂ ಆಗುತ್ತವೆ. ಶರೀರ ಗಾತ್ರ ಗರಿಷ್ಠವಾಗುವ ವೇಳೆಗೆ ಆನೆ ಚರ್ಮ 'ಬತ್ತಿದ ಕೆರೆಯ ನೆಲದಂತೆ', ಆಳ ನಾಲೆಗಳಂತೆ, ಮಿಲಿಯಾಂತರ ಬಿರುಕುಗಳ ಜಾಲದಂತೆ, ಒರಟೊರಟಾಗಿ ಸುಕ್ಕುಗೊಂಡ ಸ್ವರೂಪವನ್ನು ಪಡೆಯುತ್ತದೆ. ಬಹು ಬಿಸಿಯ ಪರಿಸರದ ಆಫ್ರಿಕದಲ್ಲಿನ ಆನೆಗಳ ಚರ್ಮದ್ದು ಹಿತಕರ ಹವೆಯ ಏಷ್ಯಾದಲ್ಲಿನ ಆನೆಗಳ ಚರ್ಮಕ್ಕಿಂತ ಅಧಿಕ ಸುಕ್ಕು.

### ಆನೆ ಚರ್ಮಕ್ಕೆ ಏಕೆ ಇಂಥ ಸ್ವರೂಪ?

ವಾಸ್ತವವಾಗಿ ಆನೆಗಳದು ಬಹಳ ದಪ್ಪನಾದ, ಮನುಷ್ಯರ ಚರ್ಮದ ಐವತ್ತು ಮಡಿ ದಪ್ಪದ ಚರ್ಮ! ಜೊತೆಗೆ ಆನೆ ಚರ್ಮದಲ್ಲಿ 'ಬೆವರಿನ ಗ್ರಂಥಿ'ಗಳು ಇಲ್ಲ. ಹಾಗಾಗಿ ಇತರ ಸ್ತನಿಗಳಲ್ಲಾಗುವಂತೆ ಬಿಸಿ ಪರಿಸರದಲ್ಲಿ ಆನೆಗಳು ಬೆವರು ಹರಿಸಿ ತಮ್ಮ ದೇಹದ ಉಷ್ಣತೆಯನ್ನು ವಿಹಿತ ಮಟ್ಟದಲ್ಲೇ ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಅದಕ್ಕೇ ಶರೀರ




ತಾಪದ ನಿಯಂತ್ರಣಕ್ಕೆ ಮತ್ತು ದೇಹವನ್ನು ಮುತ್ತುವ ಉಪದ್ರವಕಾರೀ ಪರೋಪಜೀವಿಗಳ ಕಾಟದಿಂದ ಮುಕ್ತವಾಗಿರಲು ಆನೆಗಳ ಚರ್ಮ ಸುಕ್ಕು ಸುಕ್ಕಾಗಿದೆ. ಹೇಗೆಂದು ನೀವೇ ಗಮನಿಸಿ:

- ಬಿಸಿಲು ವಿಪರೀತವಾದಾಗ ಆನೆಗಳು ದೇಹ ತಾಪವನ್ನು ಕಡಿಮೆ ಮಾಡಲು ನೀರಿನಲ್ಲಿ ಮುಳುಗೇಳುತ್ತವೆ (ಚಿತ್ರ2); ಸೊಂಡಿಲಿನಿಂದ ಮೈಮೇಲೆಲ್ಲ ನೀರನ್ನು ಎರಚಿಕೊಳ್ಳುತ್ತವೆ. ಈ ನೀರು ಚರ್ಮದ ಆಳ ಸುಕ್ಕುಗಳಲ್ಲಿ ಎಲ್ಲೆಡೆ ಹರಡಿ ನಿಲ್ಲುತ್ತದೆ ; ನಯವಾದ ಚರ್ಮದ ಹತ್ತು ಪಟ್ಟು ಪ್ರಮಾಣದಲ್ಲಿ ಶೇಖರಗೊಳ್ಳುತ್ತದೆ. ದೀರ್ಘಕಾಲ ದೇಹವನ್ನು ತಂಪಾಗಿಡುತ್ತದೆ.
- ನೀರು ಲಭ್ಯವಿಲ್ಲದಾಗ ಆನೆಗಳು ಕೆಸರಿನಲ್ಲಿ ಹೊರಳಾಡುತ್ತವೆ. ಇಲ್ಲವೇ ಮಣ್ಣನ್ನು ಸೊಂಡಿಲಿನಲ್ಲಿ ಹೀರಿ ಶರೀರಕ್ಕೆಲ್ಲ ಎರಚಿಕೊಳ್ಳುತ್ತವೆ (ಚಿತ್ರ 3). ಕೆಸರು ಅಥವಾ ಮಣ್ಣು ಧೂಳು ಆನೆ ಚರ್ಮದ ಸುಕ್ಕುಗಳಲ್ಲೆಲ್ಲ ತುಂಬಿ ನಿಲ್ಲುತ್ತದೆ; ಬಿಸಿಲಿನಲ್ಲಿ ದೇಹವನ್ನು ತಂಪಾಗಿಡುವ ಜೊತೆಗೆ ರಕ್ತ ಹೀರಲು ಬರುವ ಪಿಡುಗುಕಾರಕ ಜೀವಿಗಳಿಂದ ರಕ್ಷಣೆ ಒದಗಿಸುತ್ತದೆ.

ಈ ಅನುಕೂಲಗಳಿಗಾಗಿ ಆನೆಗಳ ಚರ್ಮ ಸುಕ್ಕು ಸುಕ್ಕಾದ ರಚನೆಯನ್ನು ಪಡೆದಿದೆ.

■ ಎನ್. ವಾಸುದೇವ್